ಈಗ ತಾನೇ ಚುನಾವಣೆ ಪ್ರಕ್ರಿಯೆ ಮುಗಿದಿದೆ. ಶಿಕ್ಷಕರು ಅವರು ಅವರನ್ನು ಮಾರಿಕೊಂಡಿದ್ದಾರೆ ಎಂದು ಹೇಳುವುದು ತಪ್ಪು, ಶಿಕ್ಷಕರು ಆ ಕ್ಷಣಕ್ಕೆ ನಿರ್ಧಾರ ಮಾಡಿರಬಹುದು, ಸೋಲಿಗೆ ವಿರೋಧಿ ಅಲೆಯೂ ಕಾರಣ ಎಂಬ ಆರೋಪ ವಿಚಾರವನ್ನು ನಾನು ಒಪ್ಪುವುದಿಲ್ಲ.

- **ಅರುಣ ಶಹಾಪುರ** ವಾಯವ್ಯ ಶಿಕ್ಷಕರ ಕ್ಷೇತ್ರದ ಪರಾಜಿತ ಬಿಜೆಪಿ ಅಭ್ಯರ್ಥಿ

ವಿಜಯೋತ್ಸವ ಆಚರಿಸಿದ ಕಾಂಗ್ರೆಸ್ ಕಾರ್ಯಕರ್ತರು

ಬೆಂಬಲಿಗರು ಹಾಗೂ ಕಾರ್ಯಕರ್ತರಿಂದ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ

- **ಕನ್ನಡಪ್ರಭ ವಾರ್ತೆ** ಬೆಳಗಾವಿ

ವಿಧಾನ ಪರಿಷತ್ತಿನ ವಾಯವ್ಯ ಶಿಕ್ಷಕರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಪ್ರಕಾಶ ಹುಕ್ಕೇರಿ ಗೆಲುವಿನ ನಗೆ ಬೀರಿದ್ದಾರೆ. ಈ ಹಿನ್ನೆಲೆಯಲ್ಲಿ ನಗರದ ಕ್ಲಬ್ ರಸ್ತೆಯಲ್ಲಿ ಅವರ ಬೆಂಬಲಿಗರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ತೀವ್ರ ಕುತೂಹಲ ಮೂಡಿಸಿದ್ದ ವಾಯವ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಕಾಶ ಹುಕ್ಕೇರಿ ಗೆಲುವು ಸಾಧಿಸಿದ್ದಾರೆ. ತಮ್ಮ ನೆಚ್ಚಿನ ನಾಯಕನ ಗೆಲುವು ಖಚಿತ ಆಗುತ್ತಿದ್ದಂತೆ ಬೆಳಗಾವಿಯ ಜ್ಯೋತಿ ಕಾಲೇಜಿನ ಹೊರಗಡೆ ಪ್ರಕಾಶ ಹುಕ್ಕೇರಿ ಅಭಿಮಾನಿಗಳು ಅವರ ಪರ ಘೋಷಣೆ ಕೂಗಿ ಸಂಭ್ರಮಿಸಿದರು. ಬೆಳಗ್ಗೆಯಿಂದ ಬೆರಳೆಣಿಕೆಯಷ್ಟು ಕಾರ್ಯಕರ್ತರು ಕಾಣಿಸಿಕೊಂಡಿದ್ದರು. ಆದರೆ ಮತ ಎಣಿಕೆ ಆರಂಭವಾಗುತ್ತಿದ್ದಂತೆ ಮುನ್ನಡೆ ಕಾಯ್ದುಕೊಂಡಿದ್ದರಿಂದ ಹಂತ ಹಂತವಾಗಿ ತಂಡೋಪ ತಂಡವಾಗಿ ಅಭಿಮಾನಿಗಳು, ಕಾರ್ಯಕರ್ತರು ಕಾಂಗ್ರೆಸ್ ಪಕ್ಷದ ಬಾವುಟ ಹಿಡಿದುಕೊಂಡು ಜಮಾವಣೆಯಾದರು. ಮಧ್ಯಾಹ್ನದ ಹೊತ್ತಿಗೂ ಕಾಂಗ್ರೆಸ್ ಅಭ್ಯರ್ಥಿ ಮುನ್ನಡೆ ಕಾಯ್ದುಕೊಂಡ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಹಾಗೂ ಬೆಂಬಲಿಗರಲ್ಲಿ ಉತ್ಸಾಹ ಹೆಚ್ಚಾಗಿತ್ತು. ನಂತರ ಕಾಂಗ್ರೆಸ್ ಬಾವುಟ ಹಿಡಿದು ಕಾಂಗ್ರೆಸ್ ಹಾಗೂ ಪ್ರಕಾಶ ಹುಕ್ಕೇರಿ ಪರ ಘೋಷಣೆಗಳನ್ನು ಕೂಗಿದರು.

ಸಂಜೆ ಹೊತ್ತಿಗೆ ಕಾಂಗ್ರೆಸ್ ಅಭ್ಯರ್ಥಿ ಪ್ರಕಾಶ ಹುಕ್ಕೇರಿ ಗೆಲುವು ಸಾಧಿಸಿದ್ದು, ಚುನಾವಣಾಧಿಕಾರಿಗಳು ಅಧಿಕೃತ ಘೋಷಣೆ ಮಾಡುವುದಷ್ಟೇ ಬಾಕಿ ಇರುವಾಗಲೇ ಸಾವಿರಾರು ಸಂಖ್ಯೆಯಲ್ಲಿ ಬೆಂಬಲಿಗರು ಮತ್ತು ಕಾರ್ಯಕರ್ತರು ಜಮಾವಣೆಯಾಗಿ ಪರಸ್ಪರ ಗುಲಾಲು ಎರಚಿ, ಸಿಹಿ ಹಂಚಿ ಸಂಭ್ರಮಿಸುವುದರ ಜತೆಗೆ ಕುಣಿದು ಕುಪ್ಪಳಿಸಿದರು.

ಮತ ಎಣಿಕೆ ಕೇಂದ್ರದಲ್ಲಿ ಹೈಡ್ರಾಮಾ!:ವಾಯವ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಕಾಶ ಹುಕ್ಕೇರಿ ಗೆಲವು ಸಾಧಿಸುತ್ತಿದಂತೆ ನಗರದ ಜ್ಯೋತಿ ಕಾಲೇಜಿನ ಮತ ಎಣಿಕೆ ಕೇಂದ್ರಕ್ಕೆ ಕಾಂಗ್ರೆಸ್ ನಾಯಕರು ಆಗಮಿಸಿದರು. ಈ ವೇಳೆ ಶಾಸಕರಾದ ಸತೀಶ ಜಾರಕಿಹೊಳಿ, ಲಕ್ಷ್ಮಿ ಹೆಬ್ಬಾಳಕರ, ಮಾಜಿ ಸಚಿವ ಎ.ಬಿ.ಪಾಟೀಲ ಸೇರಿದಂತೆ ಸುಮಾರು 10ಕ್ಕೂ ಹೆಚ್ಚು ಜನರು ಮತ ಎಣಿಕೆ ಕೇಂದ್ರದೊಳಗೆ ಪ್ರವೇಶಕ್ಕೆ ಯತ್ನಿಸಿದರು. ಈ ವೇಳೆ ಗೇಟ್‌ಗೆ ನಿಯೋಜನೆಗೊಂಡಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಚುನಾವಣಾಧಿಕಾರಿಗಳ ಅನುಮತಿ ಇಲ್ಲದೇ ಒಳಗೆ ಬಿಡುವುದಿಲ್ಲ ಎಂದು ಕಡ್ಡಿ ಮುರಿದಂತೆ ಹೇಳಿದರು.

ಇದರಿಂದಕಂಗೆಟ್ಟಕಾಂಗ್ರೆಸ್‌ನಾಯಕರುಪೊಲೀಸರೊಂದಿಗೆ ವಾಗ್ವಾದ ನಡೆಸಿದರು. ಈ ವೇಳೆ ಮಾಜಿ ಸಚಿವ ಎ.ಬಿ.ಪಾಟೀಲ ನಾನೊಬ್ಬ ಮಾಜಿ ಸಚಿವ ನಮ್ಮನ್ನೇ ಒಳಗೆ ಬಿಡುವುದಿಲ್ಲ ಎಂದರೇನು ಎಂದು ಏರು ಧ್ವನಿಯಲ್ಲಿ ವಾಗ್ವಾದ ನಡೆಸಿದರು. ಈ ವೇಳೆ ಮಧ್ಯ ಪ್ರವೇಶಿಸಿದ ಪ್ರಾದೇಶಿಕ ಆಯುಕ್ತ ಅಮ್ಲಾನ್ ಆದಿತ್ಯ ಬಿಸ್ವಾಸ್ ಅವರು, ನೀವು ಯಾರ ಬೇಕಾದ್ರು ಆಗಿ ನಾನು ಒಳಗೆ ಬಿಡಲ್ಲ ಎಂದು ಖಡಕ್ಕಾಗಿ ಹೇಳಿದರು. ಈ ವೇಳೆ ಅಸಮಾಧಾನಗೊಂಡ ಎ.ಬಿ.ಪಾಟೀಲ್, ಪ್ರಾದೇಶಿಕ ಆಯುಕ್ತ ಬಿಸ್ವಾಸ್ ಅವರೊಂದಿಗೆ ಮಾತಿನ ಚಕಮಕಿ ನಡೆಸಿದರು. ಸ್ಥಳದಲ್ಲಿಯೇ ಇದ್ದ ಶಾಸಕ ಸತೀಶ ಜಾರಕಿಹೊಳಿ ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ಮನಗಂಡು ಮಾಜಿ ಸಚಿವ ಎ.ಬಿ.ಪಾಟೀಲ್ ಅವರನ್ನು ಹೊರಗೆ ಕರೆದುಕೊಂಡು ಹೋದರು.

ಗೇಟ್‌ನಲ್ಲೇ ಪ್ರಮಾಣ ಪತ್ರ ಸ್ವೀಕರಿಸಿದ ಹುಕ್ಕೇರಿ

ಬೆಳಗಾವಿ:ಕಾಂಗ್ರೆಸ್ ಅಭ್ಯರ್ಥಿ ಗೆಲುವು ಸಾಧಿಸುತ್ತಿದ್ದಂತೆ ಪ್ರಕಾಶ ಹುಕ್ಕೇರಿ, ಸತೀಶ ಜಾರಕಿಹೊಳಿ, ಲಕ್ಷ್ಮಿ ಹೆಬ್ಬಾಳ್ಕರ ಸೇರಿ 10ಕ್ಕೂ ಹೆಚ್ಚು ಜನ ಆಗಮಿಸಿದರು. ಈ ವೇಳೆ ಕಾಂಗ್ರೆಸ್ ನಾಯಕರ ತಂಡವನ್ನು ತಡೆದ ಪೊಲೀಸರೊಂದಿಗೆ ನಾಯಕರು ಮಾತಿನಚಕಮಕಿ ನಡೆಸಿದರು. ಈ ವೇಳೆ ಚುನಾವಣಾಧಿಕಾರಿ ಅಮ್ಲಾನ್ ಆದಿತ್ಯ ಬಿಸ್ವಾಸ್ ಅವರು, ಅಭ್ಯರ್ಥಿಯನ್ನು ಹೊರತುಪಡಿಸಿ ಯಾರನ್ನೂ ಮತ ಎಣಿಕೆ ಕೇಂದ್ರದ ಒಳಗೆ ಬಿಡದಂತೆ ಸೂಚನೆ ನೀಡಿದ್ದರಿಂದ ಪೊಲೀಸರು ಯಾರನ್ನೂ ಒಳಗೆ ಬಿಡಲಿಲ್ಲ. ಈ ಹಿನ್ನೆಲೆಯಲ್ಲಿ ಅಸಮಾಧಾನಗೊಂಡ ಕಾಂಗ್ರೆಸ್ ಅಭ್ಯರ್ಥಿ ಪ್ರಕಾಶ ಹುಕ್ಕೇರಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಫೋನ್ ಮಾಡಿ ವಿಷಯ ತಿಳಿಸಿದರು.ಈ ವೇಳೆ ಪ್ರತಿಕ್ರಿಯಿಸಿದ ಸಿಎಂ ಅಧಿಕಾರಿಗಳಿಗೆ ಸೂಚನೆ ನೀಡುತ್ತೇನೆ ಎಂದು ತಿಳಿಸಿದರು. ಅಧಿಕಾರಿಗಳು ಪಟ್ಟು ಸಡಿಲಿಸದ ಹಿನ್ನೆಲೆಯಲ್ಲಿ ನಾನು ಎಲ್ಲರ ಜತೆಗೆ ಹೋಗುತ್ತೇನೆ ಇಲ್ಲವೇ ಪ್ರಮಾಣ ಪತ್ರ ಬೇಡ ಎಂದು ಪ್ರಕಾಶ ಹುಕ್ಕೇರಿ ಅಧಿಕಾರಿಗಳಿಗೆ ತಿಳಿಸಿದರು. ಬಳಿಕ ಮಧ್ಯಪ್ರವೇಶ ಮಾಡಿದ ಅಧಿಕಾರಿಗಳು, ಚುನಾವಣೆ ಆಯೋಗಕ್ಕೂ ಸಿಎಂಗೂ ಸಂಬಂಧ ಇಲ್ಲ ಎಂದರು. ಬಳಿಕ ಮತದಾನ ಕೇಂದ್ರ ಗೇಟ್‌ನಲ್ಲೆ ಎಲ್ಲ ನಾಯಕರ ಸಮ್ಮುಖದಲ್ಲೇ ಕಾಂಗ್ರೆಸ್ ಅಭ್ಯರ್ಥಿ ಪ್ರಕಾಶ ಹುಕ್ಕೇರಿ ಅವರು, ಚುನಾವಣಾಧಿಕಾರಿ ಆಮ್ಲಾನ್ ಆದಿತ್ಯ ಬಿಸ್ವಾಸ್ ಅವರಿಂದ ಪ್ರಮಾಣ ಪತ್ರ ಪಡೆದರು.

ಪರಿಷತ್
ಕದನ
ವಾಯವ್ಯ

ಹಣದ ಪ್ರವಾಹದಿಂದ ನನಗೆ ಸೋಲು

- **ಕನ್ನಡಪ್ರಭ ವಾರ್ತೆ** ಬೆಳಗಾವಿ



ಈ ಸೋಲಿನಿಂದ ನಾನು ಸಾಕಷ್ಟು ಪಾಠ ಕಲಿತಿದ್ದೇನೆ: ಶಹಾಪುರ

ಚುನಾವಣೆಯಲ್ಲಿ ಹಣದ ಪ್ರವಾಹ, ರಾಜಕೀಯ ಷಡ್ಯಂತ್ರದಿಂದ ನನಗೆ ಸೋಲುಂಟಾಗಿದೆ ಎಂದು ವಾಯವ್ಯ ಶಿಕ್ಷಕರ ಕ್ಷೇತ್ರದ ಪರಾಜಿತ ಬಿಜೆಪಿ ಅಭ್ಯರ್ಥಿ ಅರುಣ ಶಹಾಪುರ ಹೇಳಿದರು.

ಮತ ಎಣಿಕೆ ಕೇಂದ್ರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಣದ ಹೊಳೆ, ರಾಜಕೀಯ ಷಡ್ಯಂತ್ರದ ನಡುವೆಯೂ ನನ್ನ ಪರವಾಗಿಶಿಕ್ಷಕರುಮತಚಲಾಯಿಸಿದ್ದಾರೆ. ಅವರಿಗೆ ನಾನು ಧನ್ಯವಾದ ಅರ್ಪಿಸುತ್ತೇನೆ. ಈ ಸೋಲನ್ನು ನಾನು ಸ್ಪರ್ಧಾತ್ಮಕವಾಗಿ ಸ್ವೀಕರಿಸುತ್ತೇನೆ ಎಂದರು.

ಈ ಸೋಲಿನಿಂದ ನಾನು ಸಾಕಷ್ಟು ಪಾಠ ಕಲಿತಿದ್ದೇನೆ. ಪಕ್ಷದ ಎಲ್ಲರೂ ಪ್ರಾಮಾಣಿಕ ಕೆಲಸ ಮಾಡಿದ್ದಾರೆ. ನಮ್ಮ ಪಕ್ಷದ ಸಚಿವರು, ಶಾಸಕರು, ಕಾರ್ಯಕರ್ತರು ಒಳ್ಳೆಯ ಮನಸಿನಿಂದ ಕೆಲಸ ಮಾಡಿದ್ದಾರೆ. ಪ್ರಜಾತಂತ್ರದಲ್ಲಿ ನಂಬಿಕೆ ಇದೆ. ಶಿಕ್ಷಕರ ಪರವಾಗಿ ಇದ್ದೇನೆ. ಶಿಕ್ಷಕರು ಹಣಕ್ಕೆ ಮಾರಾಟ ಮಾಡಿಕೊಂಡಿದ್ದಾರೆ ಎನ್ನುವುದಿಲ್ಲ. ನನ್ನ ಸೋಲಿಗೆ ಕಾರಣ ಏನು ಎಂಬುದರ ಕುರಿತು ಆತ್ಮಾವಲೋಕನ ಮಾಡಿಕೊಳ್ಳುತ್ತೇವೆ. ಹಣ ಹೊಳೆ ಹರಿಸಿದ್ದರಿಂದ ಹಾಗೂ ವಿರೋಧ ಪಕ್ಷಗಳ ರಾಜಕೀಯ ಷಡ್ಯಂತ್ರಕ್ಕೆ ಸೋಲುಂಟಾಗಿದೆ ಎಂದರು.

ಈಗ ತಾನೇ ಚುನಾವಣೆ ಪ್ರಕ್ರಿಯೆ ಮುಗಿದಿದೆ. ಶಿಕ್ಷಕರು ಅವರು ಅವರನ್ನು ಮಾರಿಕೊಂಡಿದ್ದಾರೆ ಎಂದು ಹೇಳುವುದು ತಪ್ಪು, ಶಿಕ್ಷಕರು ಆ ಕ್ಷಣಕ್ಕೆ ನಿರ್ಧಾರ ಮಾಡಿರಬಹುದು, ಸೋಲಿಗೆ ವಿರೋಧಿ ಅಲೆಯೂ ಕಾರಣ ಎಂಬ ಆರೋಪ ವಿಚಾರವನ್ನು ನಾನು ಒಪ್ಪುವುದಿಲ್ಲ ಎಂದರು.

ಸಚಿವ ಉಮೇಶ ಕತ್ತಿ ಅವರು ಚುನಾವಣೆ ರದ್ದು ಮಾಡಬೇಕು ಎಂದು ನೀಡಿದ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ಅವರಿಗೆ ನನ್ನ ಮೇಲೆ ಪ್ರೀತಿ ಜಾಸ್ತಿ. ಹೀಗಾಗಿ ಅವರು ಹೇಳಿಕೆ ನೀಡಿದ್ದಾರೆ. ಬೆಳಗಾವಿಗೆ ಬೆಳಗಾವಿ ಪ್ರತಿನಿಧಿ ಆಯ್ಕೆ ಆಗಬೇಕು ಎಂಬ ಶಿಕ್ಷಕರ ವಿಚಾರ. ಸೋಲಿಗೆ ಕಾರಣವನ್ನೂ ಆತ್ಮಾವಲೋಕನ ಮಾಡಿಕೊಳ್ಳಲು ಅವಕಾಶ ಇದೆ ಎಂದರು.

ಬಿಜೆಪಿ ನಾಯಕರು ಮುದಿ ಎತ್ತು ಮುದಿ ಎತ್ತು ಎಂದು ಪ್ರಕಾಶ ಹುಕ್ಕೇರಿ ಅವರನ್ನು ಟೀಕಿಸಿದ್ದರು. ಆದೇ ನಿಮಗೆ ಮುಳುವಾಯ್ತಾ ಎಂಬ ಪ್ರಶ್ನೆಗೆ ಉತ್ತರಿಸಿದ ಶಹಾಪುರ, ಖಂಡಿತ ಅದು ಸತ್ಯ ಎಂದು ಅವರು ಒಪ್ಪಿಕೊಂಡರು.

ಹುಕ್ಕೇರಿ ಗೆಲುವು: ಸತೀಶ ಹರ್ಷ

- **ಕನ್ನಡಪ್ರಭ ವಾರ್ತೆ** ಬೆಳಗಾವಿ

ವಿಧಾನ ಪರಿಷತ್‌ನ ವಾಯವ್ಯ ಶಿಕ್ಷಕರ ಮತಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿ, ಹಿರಿಯರಾದ ಪ್ರಕಾಶ ಹುಕ್ಕೇರಿ ಅವರ ಗೆಲುವು ಸಂತಸ ತಂದಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ, ಶಾಸಕ ಸತೀಶ್ ಜಾರಕಿಹೊಳಿ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಎರಡು ಬಾರಿ ಬಿಜೆಪಿ ಅಭ್ಯರ್ಥಿ ಅರುಣ ಶಹಾಪುರ ಗೆಲುವು ಸಾಧಿಸಿದ್ದು, ಮೂರನೇ ಬಾರಿ ಅವರ ಗೆಲುವಿಗೆ ಪ್ರಕಾಶ ಹುಕ್ಕೇರಿ ಅವರು ಬ್ರೇಕ್ ಹಾಕಿದ್ದಾರೆ. ಬೆಳಗಾವಿ, ಬಾಗಲಕೋಟೆ, ವಿಜಯಪುರ ಜಿಲ್ಲೆಯ ಎಲ್ಲ ಕಾಂಗ್ರೆಸ್ ಮುಖಂಡರು, ರಾಜ್ಯ ನಾಯಕರು, ಕಾರ್ಯಕರ್ತರು ಶ್ರಮಿಸಿದ್ದರಿಂದ ಕಾಂಗ್ರೆಸ್ ಅಭ್ಯರ್ಥಿ ಪ್ರಕಾಶ ಹುಕ್ಕೇರಿ ಅವರಿಗೆ ಗೆಲುವು ಲಭಿಸಿದೆ ಎಂದರು.

ಪ್ರಕಾಶ ಹುಕ್ಕೇರಿ ಬಗ್ಗೆ ಬಿಜೆಪಿಯವರು ಪದೇ ಪದೇ ಆರೋಪ ಮಾಡುತ್ತಿದ್ದರು. ಆದರೆಈಗಚುನಾವಣೆಯಲ್ಲಿ ಪ್ರಕಾಶ ಹುಕ್ಕೇರಿ ಅವರ ಪರ ಶಿಕ್ಷಕರು ಹೆಚ್ಚಿನ ಮತ ನೀಡಿ ಉತ್ತಮ ಕೆಲಸಗಾರರು ಎಂದು ಬಿರುದು ನೀಡಿದ್ದಾರೆ. ಈ ಫಲಿತಾಂಶ ಮುಂದಿನ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಚುನಾವಣೆಗೆ ದಿಕ್ಸೂಚಿ ಆಗಲಿದ್ದು, ಕಾಂಗ್ರೆಸ್ ಪಕ್ಷಕ್ಕೆ ಇನ್ನಷ್ಟು ಬಲ ಬಂದಂತಾಗಿದೆ. ಪ್ರಕಾಶ ಹುಕ್ಕೇರಿ ಅವರಿಗೆ ಮತ್ತು ಕಾರ್ಯಕರ್ತರಿಗೂ ಅಭಿನಂದನೆ ಹೇಳಿದರು.

ಇಲ್ಲಸಲ್ಲದ ಆರೋಪ ಮಾಡಿದವರಿಗೆ ಪ್ರತ್ಯುತ್ತರ

- **ಕನ್ನಡಪ್ರಭ ವಾರ್ತೆ** ಬೆಳಗಾವಿ

ವಾಯವ್ಯ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಕಾಂಗ್ರೆಸ್ ಅಭ್ಯರ್ಥಿ ಪ್ರಕಾಶ ಹುಕ್ಕೇರಿ ಅವರ ಆಯ್ಕೆಗೆ ಸಂತಸ ವ್ಯಕ್ತಪಡಿಸಿ ರುವ ಶಾಸಕಿ ಲಕ್ಷ್ಮೀ ಹೆಬ್ಬಾಳ ಕರ ಅವರು, ಇಲ್ಲಸಲ್ಲದ ಆರೋಪಗಳನ್ನು ಮಾಡಿದವರಿಗೆ ಶಿಕ್ಷಕ ಮತದಾರರು ತಕ್ಕ ಪ್ರತ್ಯುತ್ತರ ನೀಡಿದ್ದಾರೆ ಎಂದಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ಬಿಜೆಪಿಯವರು ಅನಗತ್ಯವಾಗಿ ಶಿಕ್ಷಕರಲ್ಲಿ ಗೊಂದಲ ಸೃಷ್ಟಿಸಲು ಪ್ರಯತ್ನಿಸಿದ್ದರು. ಪ್ರಕಾಶ ಹುಕ್ಕೇರಿ ಮುದಿ ಎತ್ತು, ಅವರು ಎಸ್‌ಎಸ್‌ಎಲ್‌ಸಿ ಪಾಸಾಗಲಿಲ್ಲ, ಹಣ ಹಂಚಿದ್ದಾರೆ ಎಂದೆಲ್ಲ ಹೇಳುವ ಮೂಲಕ ಶಿಕ್ಷಕರ ದಾರಿ ತಪ್ಪಿಸುವ ಯತ್ನ ಮಾಡಿದ್ದರು. ಆದರೆ ಇದಕ್ಕೆಲ್ಲ ಮತದಾರರು ಕಿವಿಗೊಡದೆ ಮತ ಚಲಾಯಿಸುವ ಮೂಲಕ ಪ್ರಕಾಶ ಹುಕ್ಕೇರಿಯವರನ್ನು ಗೆಲ್ಲಿಸಿದ್ದಾರೆ ಎಂದಿದ್ದಾರೆ. ಕಾಂಗ್ರೆಸ್ ಪಕ್ಷದ ಎಲ್ಲ ಕಾರ್ಯಕರ್ತರು, ಮುಖಂಡರು ಒಟ್ಟಾಗಿ ನಿಂತು ಕೆಲಸ ಮಾಡಿದ್ದು, ಪ್ರಕಾಶ ಹುಕ್ಕೇರಿಯವರ ಹಿಂದಿನ ಸಾಧನೆ ಹಾಗೂ ಕಾಂಗ್ರೆಸ್ ಪಕ್ಷದ ಇತಿಹಾಸ ಮತ್ತು ಜನಪರ ಕೆಲಸಗಳಿಗೆ ಸಂದ ಜಯ ಇದಾಗಿದೆ. ಮತದಾರರಿಗೆ ಪಕ್ಷದ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇವೆ ಎಂದು ಅವರು ತಿಳಿಸಿದ್ದಾರೆ.

CHANGE OF NAME

I have changed my name from
Kavita Balachandra Kamagounda
(old name) to
Kavita Prashant Doshi
(new name) vide affidavit sworn to before S.B. Desai, Advocate & Notary, Belagavi
Dated:13 June 2022.

ಕನ್ನಡಪ್ರಭ
ಪ್ರತಿ ಶುಕ್ರವಾರ ಸಿನಿಮಾ ಸುದ್ದಿಗಳ ಪುರವಣಿ ಚಿತ್ರಪ್ರಭ
SANDALWOOD TOLLYWOOD KOLLYWOOD MOLLYWOOD BOLLYWOOD HOLLYWOOD
ಚಿತ್ರಪ್ರಭ

O.S. No.487/2022

IN THE COURT OF HON'BLE III ADDL . CIVIL JUDGE & J.M.F.C BELAGAVI AT; BELAGAVI.

BETWEEN:
1.Smt. Changubai Wd/o. Mal lappa Malavi and others
..... **PLAINTIFFS.**
AND
1] The State (Represented by District Commissioner Belagavi) And another
........DEFENDANTS

PAPER PUBLICATION

Whereas the plaintiffs have filed the top noted suit against the defendants for the relief of declaration and mandatory injunction which is pending on the file of the Hon'ble III Addl. Civil judge and JMFC Belagavi. Hence, I hereby call upon public at large to file objections if any regarding the claim of the plaintiffs by putting appearance in the top noted suit fixed on 30.06.2022 at 10.30 AM personally or through authorized Advocate, on failure to appear on the said date, the matter will be heard in accordance with law.

Issued under my seal on 14-6-22
BY ORDER OF THE COURT
SHERISTEDAR
III ADDL. CIVIL JUDGE AND JMFC BELAGAVI
BENCH CLERK
III ADDL. CIVIL JUDGE AND JMFC BELAGAVI

Sd/- A. G. BAILUR
ADV. FOR PLAINTIFF

IN THE COURT OF THE CITY CIVIL, XCI ADDL, SESSIONS AND SPECIAL JUDGE AT BENGALURU

Misc. No. 427/2020

Between
The Competent Authority
For-M/S TGS Construction Pvt Ltd.,
Chief Administrative Officer, NHM,
Health and Family Welfare Department,
Arogya Soudha, 1st Floor, West Wing,
Magadi Road, Bangalore-23 .....**Petitioner**
And
1. M/S TGS Construction Pvt Ltd.,
Represented by its Managing Director,
Smt. Mandeep Kaur,
No. 577/B, II Floor, Outer Ring Road,
Teachers Colony Koramangala,
Near Silk Board, Bengaluru-560034
& 2 Others .....**Respondents**

Notice to Respondent No. 1 To 3

1. M/S TGS Construction Pvt Ltd.,
Represented by its Managing Director,
Smt. Mandeep Kaur,
No. 577/B, II Floor, Outer Ring Road,
Teachers Colony Koramangala,
Near Silk Board, Bengaluru-560034

2. Smt. Mandeep Kaur W/o Sachin Naik
No. 577/B, II Floor, Outer Ring Road,
Teachers Colony Koramangala,
Near Silk Board, Bengaluru-560068

3. Smt. Leelavathi
Aged about 37 Years,
W/o. Late. Lakshminarayan,
R/At. Bannikuppe Grama,
Agalagurki Post,
Chikkaballapura Taluk,
Chikkaballapura District-562101
(Mother House)

Permanently Residing At:
Smt. Leelavathi
Aged about 37 Years,
W/o. Late. Lakshminarayan,
#468, Harigana Colony, Devnahalli,
Bengaluru Rural District-562110

Whereas, the petitioner has filed the above petition under section 5(2) of the KPIDFE Act 2004 against Respondents.

The Respondent No. 1, 2 and 3 is hereby issued show cause notice u/s 12(1) of KPIDEF Act 2004, to appear before the court of the XCI Addl, City Civil & Sessions Judge (CCH-92) at Bengaluru, in person or through a pleader duly instructed and able to answer all material questions relating to above petitions on 7th July 2022 at 11.00 'O' Clock in the forenoon.

Take notice that in default of your appearance on the Date & Time above mentioned, the petition will be heard and determined in your absence.

Given under my hand and seal of the court on this day 8th June 2022.

By Order of the Court

Special Public Prosecutor
Venkatesh P. Dalwai
No.: 46, Z-Plaza, 2nd Main Road,
Sheshadripuram, Bangalore-560020.
DIPR/CP/Advt/898/2022-23

IN THE COURT OF THE CITY CIVIL, XCI ADDL, SESSIONS AND SPECIAL JUDGE AT BENGALURU

Misc. No. 428/2020

Between
The Competent Authority
For-M/S TGS Construction Pvt Ltd.,
Chief Administrative Officer, NHM,
Health and Family Welfare Department,
Arogya Soudha, 1st Floor, West Wing,
Magadi Road, Bangalore-23 .....**Petitioner**
And
1. M/S TGS Construction Pvt Ltd.,
Represented by its Managing Director,
Smt. Mandeep Kaur,
No. 577/B, II Floor, Outer Ring Road,
Teachers Colony Koramangala,
Near Silk Board, Bengaluru-560034
& 2 Others .....**Respondents**

Notice to Respondent No. 1 To 3

1. M/S TGS Construction Pvt Ltd.,
Represented by its Managing Director,
Smt. Mandeep Kaur,
No. 577/B, II Floor, Outer Ring Road,
Teachers Colony Koramangala,
Near Silk Board, Bengaluru-560034

2. Smt. Mandeep Kaur W/o Sachin Naik
No. 577/B, II Floor, Outer Ring Road,
Teachers Colony Koramangala,
Near Silk Board, Bengaluru-560068

3. Sri. N. Khallel,
Aged about 55 Years,
W/o. Noor Sab,
Aged about 55 Years,
S/o. Late Venkatappa,
R/At. NO. 5/84, 8th Main,
LIC Colony, Jayanagar III Block,
Bengaluru-560011.

Whereas, the petitioner has filed the above petition under section 5(2) of the KPIDFE Act 2004 against Respondents.

The Respondent No. 1, 2 and 3 is hereby issued show cause notice u/s 12(1) of KPIDEF Act 2004, to appear before the court of the XCI Addl, City Civil & Sessions Judge (CCH-92) at Bengaluru, in person or through a pleader duly instructed and able to answer all material questions relating to above petitions on 28th June 2022 at 11.00 'O' Clock in the forenoon.

Take notice that in default of your appearance on the Date & Time above mentioned, the petition will be heard and determined in your absence.

Given under my hand and seal of the court on this day 8th June 2022.

By Order of the Court

Special Public Prosecutor
Venkatesh P. Dalwai
No.: 46, Z-Plaza, 2nd Main Road,
Sheshadripuram, Bangalore-560020.
DIPR/CP/Advt/899/2022-23

ಬಸವಣ್ಣನವರ ಇತಿಹಾಸ ತಿರುಚಿದ್ದು ಖಂಡನೀಯ

ಸವದತ್ತಿ:ಶಾಲಾ ಪಠ್ಯಪುಸ್ತಕದಲ್ಲಿ ಬಸವಣ್ಣನವರ ಕುರಿತು ಅನ್ಯ ಇತಿಹಾಸದ ವಿಷಯಗಳನ್ನು ಸೇರಿಸಿರುವುದನ್ನು ಖಂಡಿಸಿ ಹಾಗೂ ಹೊಸ ಪಠ್ಯದಲ್ಲಿರುವ ವಿಷಯವನ್ನು ಸರಿಪಡಿಸಬೇಕೆಂದು ಒತ್ತಾಯಿಸಿ ಸವದತ್ತಿಯ ಶರಣ ಸಂಗಮ ಮತ್ತು ಬಸವಪರ ಸಂಘಟನೆಗಳ ಒಕ್ಕೂಟದವರು ಬುಧವಾರ ತಹಸೀಲ್ದಾರ್‌ಗೆ ಮನವಿ ನೀಡಿದರು. ಬಿ.ಎಸ್.ಕಪ್ಪಣ್ಣವರ ಮಾತನಾಡಿ, ಪರಿಷ್ಕೃತ ಒಂಬತ್ತನೇ ತರಗತಿಯ ಸಮಾಜ ವಿಜ್ಞಾನಪಠ್ಯದಲ್ಲಿಲಿಂಗಾಯತಧರ್ಮಗುರುಬಸವಣ್ಣನವರ ಕುರಿತು ಕೆಲವು ಬದಲಾವಣೆ ಮಾಡಿ ಪ್ರಕಟಿಸಿರುವುದು ಕುಚೋದ್ಯದ ಸಂಗತಿಯಾಗಿದೆ ಎಂದರು. ಇತಿಹಾಸವನ್ನು ತಿರಚುವ ಕೆಲಸವನ್ನು ಬಿಟ್ಟು ನೈಜ ಇತಿಹಾಸವನ್ನು ಮಕ್ಕಳಿಗೆ ಬೋಧಿಸುವ ಕೆಲಸವಾಗಬೇಕೆಂದರು. ಬಸವರಾಜ ಪಟ್ಟಿ, ಎಲ್.ಎಸ್.ನಾಯಕ, ನಿಂಗಪ್ಪ ಮೀಶಿ, ಬಾಳಪ್ಪ ಮಡಿವಾಳರ ಇತರರು ಉಪಸ್ಥಿತರಿದ್ದರು.

ಇಂದಿನಿಂದ ಹನುಮಂತ ದೇವರ ಜಾತ್ರೆ

ಬೈಲಹೊಂಗಲ:ಪಟ್ಟಣದ ಹಳೇ ಹನುಮಂತ ದೇವರ ಜಾತ್ರಾ ಮಹೋತ್ಸವ ಜೂ.16 ರಿಂದ 20ವರೆಗೆ ಜರುಗಲಿದೆ. 16 ರಂದು ಕಳಸಾರೋಹಣ, 17ರಂದು ಭಜನಾ, 18ರಂದು ಹನುಮನಿಗೆ ರುದ್ರಾಭಿಷೇಕ, ವಸ್ತ್ರಾಭರಣ ಅಲಂಕಾರ ಸೇವೆ ಸಂಜೆ ಮಹಾರಥೋತ್ಸವ ಜರುಗಲಿದೆ. 19ರಂದು ಹನುಮನಿಗೆ ಅಭಿಷೇಕ, ಕುಂಕುಮ ಪೂಜೆ, ಅಲಂಕಾರ ಸೇವೆ ಜರುಗುವವು. 20ರಂದು ಹನುಮನಿಗೆ ಅಭಿಷೇಕ, ಬುತ್ತಿಪೂಜೆ, ಸಾಂಸ್ಕೃತಿಕ ಕಾರ್ಯಕ್ರಮ ನಡೆಯುವವು.

ಜೋಡಿ ಕೊಲೆ: ಮೂವರು ಅಪರಾಧಿಗಳಿಗೆ ಗಲ್ಲು ಶಿಕ್ಷೆ

- **ಕನ್ನಡಪ್ರಭ ವಾರ್ತೆ** ಚಿಕ್ಕೋಡಿ



ಅನೈತಿಕ ಸಂಬಂಧ ಶಂಕಿಸಿ 2013ರಲ್ಲಿ ನಡೆದಿದ್ದ ಜೋಡಿ ಕೊಲೆ ಪ್ರಕರಣದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಮೂವರು ಅಪರಾಧಿಗಳಿಗೆ ಚಿಕ್ಕೋಡಿಯ 7ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಬುಧವಾರ ಗಲ್ಲು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಮಮದಾಪುರ ಕೆಕೆ ಗ್ರಾಮದ ಬಾಬು ಮುತ್ತಪ್ಪಾ ಆಕಳೆ (24), ನಾಗಪ್ಪ ಮುತ್ತಪ್ಪಾ ಆಕಳೆ (21), ಮುತ್ತಪ್ಪಾ ಭೀಮಪ್ಪಾ ಆಕಳೆ (20) ಗಲ್ಲು ಶಿಕ್ಷೆಗೊಳಗಾದವರು. 22.10.2013ರಂದು ಚಿಕ್ಕೋಡಿಯ ಮಮದಾಪುರ ಕೆಕೆ ಗ್ರಾಮದ ಬಾಬು ಮುತ್ತಪ್ಪ ಆಕಳೆಯ ಪತ್ನಿ ಸಂಗೀತಾ ಮತ್ತು ಬಸವರಾಜ ಪ್ರಭಾಕರ ಬುರ್ಜಿ ಅವರನ್ನು ಹತ್ಯೆ ಮಾಡಲಾಗಿತ್ತು. ಈ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಎಸ್.ಎಲ್.ಚವ್ಹಾಣ ಅವರು ಆರೋಪಿಗಳ ಅಪರಾಧ ಸಾಬೀತಾದ ಹಿನ್ನೆಲೆಯಲ್ಲಿ ಬುಧವಾರ ಗಲ್ಲು ಶಿಕ್ಷೆ ವಿಧಿಸಿದರು.

ಏನಿದು ಪ್ರಕರಣ: 22.10.2013ರಲ್ಲಿ ಆರೋಪಿತ ಬಾಬು ಮುತ್ತಪ್ಪ ಆಕಳೆಯ ಪತ್ನಿಯು ಮತ್ತೊಬ್ಬನೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿ ದ್ದಾಳೆ ಎಂಬ ಕಾರಣಕ್ಕೆ ಮುತ್ತಪ್ಪ ತನ್ನ ಸ್ನೇಹಿತರೊಂದಿಗೆ ಸೇರಿಕೊಂಡು ಸಂಗೀತಾ ಮತ್ತು ಆಕೆಯ ಪ್ರಿಯಕರ ಎನ್ನಲಾದ ಬಸವರಾಜ ಬುರ್ಜಿಯನ್ನು ಹೊರಗೆ ಎಳೆದು ತಂದು ಜಾಲಿ ಗಿಡಕ್ಕೆ ಕಟ್ಟಿ ಹಾಕಿದ್ದಾರೆ. ಮಾತ್ರವಲ್ಲ ಇಬ್ಬರನ್ನು ಅಲ್ಲಿಯೇ ಕೊಚ್ಚಿಹಾಕಿದ್ದಾರೆ. ಹತ್ಯೆಗೂ ಮುನ್ನ ಬಸವರಾಜನ ಸಂಬಂಧಿ ಶಿವಾನಂದ ಬುರ್ಜಿ ಬಿಡಿಸಲು ಹೋದಾಗ ಆತನ ಮೇಲೆಯೂ ಹಲ್ಲೆ ನಡೆಸಿ ಹತ್ಯೆಗೆ ಯತ್ನಿಸಿದ್ದರು. ನಂತರ ಈ ಕುರಿತು ಚಿಕ್ಕೋಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ನಂತರ ಅಂದಿನ ಸಿಪಿಐ ಶಂಕರ ಎಂ.ರಾಗಿ ಅವರು ಆರೋಪಿತರ ಮೇಲೆ ದೋಷಾ ರೋಪಣ ಪತ್ರ ಸಲ್ಲಿಸಿದ್ದರು. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ವೈ. ಜಿ. ತುಂಗಳ ವಾದ ಮಂಡಿಸಿದರು.

ಸಿಇಟಿ ಪರೀಕ್ಷೆ: ಇಂದಿನಿಂದ 18ರವರೆಗೆ 144 ಜಾರಿ

ಬೆಳಗಾವಿ: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಜೂನ್ 16, 17 ಮತ್ತು 18ರಂದು ಬೆಳಗಾವಿ ಹಾಗೂ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಗಳಲ್ಲಿ ವೃತ್ತಿಪರಕೋರ್ಸ್‌ಗಳಪ್ರವೇಶಕ್ಕಾಗಿ ಸಾಮಾನ್ಯ ಪರೀಕ್ಷೆ(ಸಿಇಟಿ)ಗಳನ್ನು ನಡೆಸುತ್ತಿದೆ. ಶಾಂತಿಯುತ, ಸುವ್ಯವಸ್ಥಿತವಾಗಿ ಪರೀಕ್ಷೆ ನಡೆಸುವುದಕ್ಕಾಗಿ ಪರೀಕ್ಷಾ ಕೇಂದ್ರಗಳ 200 ಮೀಟರ್ ವ್ಯಾಪ್ತಿಯಲ್ಲಿ 144 ಸೆಕ್ಷನ್ ಜಾರಿಗೊಳಿಸಲಾಗಿದೆ.

ಬೆಳಗಾವಿ ಶೈಕ್ಷಣಿಕ ಜಿಲ್ಲೆಯ 15 ಮತ್ತು ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ 14 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿದ್ದು ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ 144 ಸೆಕ್ಷನ್ ಅಡಿ ನಿಷೇಧಾಜ್ಞೆ ವಿಧಿಸಲಾಗಿದೆ. ಜೂನ್ 16ರಂದು ಜೀವಶಾಸ್ತ್ರ, ಗಣಿತ, ಜೂನ್ 17ರಂದು ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೂನ್ 18ರಂದು ಹೊರನಾಡು ಹಾಗೂ ಗಡಿನಾಡು ಕನ್ನಡಿಗ ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಸಾಮಾಜಿಕ ಅರಣ್ಯ ವಿಭಾಗ, ಕೋಲಾರ.

ಸಂಖ್ಯೆ: ಎ2/ಜಿಯುಡಿ/ಟೆಂಡರ್/ಸಿಆರ್-19/2021-22 ದಿನಾಂಕ: 04.06.2022

("ಇ"ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ)

ಈ ಮೂಲಕ ಈ ವಿಭಾಗದ ನೊಂದಾಯಿತ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, 2022-23ಸಾಲಿನಲ್ಲಿ ಕೋಲಾರ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಗೆ ಒಳಪಡುವ ಕೋಲಾರ, ಮಾಲೂರು, ಬಂಗಾರಪೇಟೆ, ಮುಳಬಾಗಿಲು, ಶ್ರೀನಿವಾಸಪುರ ಮತ್ತು ಕೆ.ಜಿ.ಎಫ್ ಸಾಮಾಜಿಕ ಅರಣ್ಯ ವಲಯಗಳಲ್ಲಿ ಸಾಮಾಜಿಕ ಅರಣ್ಯ ವಲಯಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿ ಇತರೇ ಕಾಮಗಾರಿಗಳನ್ನು ಕೈಗೊಳ್ಳಲು ಈ ವಿಭಾಗದಲ್ಲಿ ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ **ದಿನಾಂಕ: 24.06.2022ರಂದು** ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ.

ಮೊದಲನೇ ಬಾರಿಗೆ: (1) ಟೆಂಡರ್ ಫಾರಂಗಳನ್ನು ಪಡೆಯಲು ಕೊನೆಯ ದಿನಾಂಕ: **16.06.2022. (2)** ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **22.06.2022. (3)** ತಾಂತ್ರಿಕ ಬಿಡ್ ತೆರೆಯಲು ಕೊನೆಯ ದಿನಾಂಕ: **23.06.2022. (4)** ಆರ್ಥಿಕ ಬಿಡ್ ತೆರೆಯಲು ಕೊನೆಯ ದಿನಾಂಕ: **24.06.2022.**

ಸದರಿ ದಿನದಂದು ಟೆಂಡರ್ ನಡೆಯದಿದ್ದಲ್ಲಿ, ಟೆಂಡರ್‌ಗಳು ಬಾರದಿದ್ದಲ್ಲಿ ಅದೇ ಷರತ್ತಿಗೊಳಪಟ್ಟು ಎರಡನೇ ಬಾರಿಗೆ **ದಿನಾಂಕ: 30.06.2022ರಂದು** ಪುನಃ ಮರು ಟೆಂಡರ್ ಆಹ್ವಾನಿಸಲಾಗಿರುತ್ತದೆ. **ಹೆಚ್ಚಿನ ವಿವರಗಳಿಗೆ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.**

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ವಿಭಾಗ, ಕೋಲಾರ.

ವಾ.ಸಾ.ಸಂ.ಇ/ಕೋಲಾರ/ಆರ್.ಒ.ಸಂಖ್ಯೆ 146/ಎಂಸಿಎ/2022-23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ICICI Home Finance

ಕಾರ್ಪೊರೇಟ್ ಕಛೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಎಚ್‌ಎಫ್‌ಸಿ ಟವರ್, ಅಂಧೇರಿ - ಕುರ್ಲಾ ರಸ್ತೆ, ಅಂಧೇರಿ (ಪೂರ್ವ), ಮುಂಬೈ - 400059, ಇಂಡಿಯಾ
ಶಾಖಾ ಕಛೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಸಿಟಿಎಸ್ ನಂ. 3414, 1ನೇ ಮಹಡಿ, ಅನಂತ್ ಪ್ಲಾಜಾ, ಸಂದೇವಿ ಗಲ್ಲಿ, ಖಾಡೆ ಬಜಾರ್, ಬೋಗರ್ವ್ಸ್ ಸರ್ಕಲ್ ಹತ್ತಿರ, ಬೆಳಗಾವಿ-590002.

[ನಿಯಮ 8(6)ಕ್ಕೆ ಪ್ರೊವಿಸೊಗಳನ್ನು ನೋಡಿರಿ]
ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಸೂಚನೆ

2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8(6)ಕ್ಕೆ ಪ್ರಾವಿಸೋಗಳ ಜೊತೆ ಓದಿಕೊಳ್ಳಬೇಕಾದ 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಸ್ಥಿರ ಆಸ್ತಿ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆ.

ಸಾಲಗಾರ(ರಿ)ನಿಗೆ ಮತ್ತು ಜಾಮೀನುದಾರ(ರಿ)ನಿಗೆ ನಿರ್ದಿಷ್ಟವಾಗಿ ಹಾಗೂ ಸಾರ್ವಜನಿಕವಾಗಿ ವಿಸ್ತಾರವಾಗಿ ಸೂಚನೆ ನೀಡುವುದೇನೆಂದರೆ ಭದ್ರತಾ ಸಾಲಗಾರರು ಬ್ಯಾಂಕಿಗೆ ಸ್ವಾಧೀನಕ್ಕಾಗಿ ಅಡಮಾನಿತ/ಸುಪರ್ದಿಗೆ ನೀಡಿರುವ ಕೆಳಕಂಡಂತೆ ವಿವರಿಸಲಾದ ಆಸ್ತಿಗಳನ್ನು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿ., ಬ್ಯಾಂಕ್‌ನ ಅಧಿಕೃತ ಅಧಿಕಾರಿಗಳು ಸಾಂಕೇತಿಕ ಸ್ವಾಧೀನಪಡಿಸಿಕೊಂಡಿದ್ದು ಇವುಗಳನ್ನು ಎಲ್ಲಿ ಹೇಗಿದೆಯೋ ಹಾಗೆಯೇ, ಎಲ್ಲಿ ಏನಿದೆಯೋ ಹಾಗೆಯೇ, ಮತ್ತು ಎಲ್ಲಿ ಏನೇನಿದೆಯೋ ಆಧಾರದಲ್ಲಿ ಮಾರಾಟ ಮಾಡಲಿದ್ದಾರೆ. ಸಂಕ್ಷಿಪ್ತ ವಿವರಣೆಗಳನ್ನು ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ	ಸಾಲಗಾರನ(ರು)ಗಳ/ ಸಹ ಸಾಲಗಾರನ(ರ)/ ಜಾಮೀನುದಾರನ(ರ)ಹೆಸರು ಕಾನೂನು ಉತ್ತರಾಧಿಕಾರಿಗಳು ಸಾಲದ ಖಾತಾ ಸಂ.	ಭದ್ರತಾ ಆಸ್ತಿಯ ವಿವರಗಳು ತಿಳಿದಿರುವ ಋಣ ಬಾಧ್ಯತೆಗಳೊಂದಿಗೆ ಏನಾದರೂ ಇದ್ದಲ್ಲಿ	ಬಾಕಿ ಯಾಗಿರುವ ಮೊತ್ತ	ಮೀಸಲು ಬೆಲೆ ಅರ್ನೆಸ್ಟ್ ಹಣ ಠೇವಣಿ	ಆಸ್ತಿಯ ಪರಿಶೀಲಿಸ ಬಹುದಾದ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಹಾಗೂ ಸಮಯ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)	(ಜಿ)
1.	ಮಹಾದೇವ್ ಈಶ್ವರಪ್ಪ ಬೋಸ್ಕಿ (ಸಾಲಗಾರರು) ಸ್ವಾಪ್ನಿಲ್ ಮಹಾದೇವ್ ಬೋಸ್ಕಿ (ಸಹ-ಸಾಲಗಾರರು) ಖಾತಾ ಸಂಖ್ಯೆ NHNPN00001256733	Cts No. 3337A/2A, (ಹಳೆ) ಹೊಸ Cts No. 3337A/2A/1B, ಆಸ್ತಿ ಐಡಿ 1-1-505-54, ಸಖರ್ವಾಡಿ, ಮರಾಠ ಮಂಡಲ್ ಐಟಿಐ ಕಾಲೇಜ್ ಹತ್ತಿರ, ನಿಪಾಣಿ ಸಿಟಿ, ತಾಲ್ಲೂಕು, ಚಿಕ್ಕೋಡಿ, ಜಿಲ್ಲೆ-ಬೆಳಗಾವಿ-591237.	Rs. 53,33,673/- (As on 7th June, 2022)	Rs. 80,00,000/- Rs. 8,00,000/-	28th June, 2022 11:00 AM to 03:00PM	30th June, 2022 02:00 PM to 03:00 PM

ಮೇಲೆ ವಿವರಿಸಲಾದ ಭದ್ರತಾ ಆಸ್ತಿಗಳ ಹರಾಜು ಮಾರಾಟವು ಹರಾಜಿನ ಏಜೆನ್ಸಿಯವರಾದ ಆ್ಯಕ್ಷನ್ ಟೈಗರ್ ಮೂಲಕ (**URL Link-https://sarfaesi.auctiontiger.net/EPROC/**) ಎಂಬುದರ ಮೇಲೆ ನಡೆಯುತ್ತದೆ. ಅಡಮಾನದಾರರಿಗೆ/ನೋಟೀಸರವರಿಗೆ ಅವರ ಒಟ್ಟು ಬಾಕಿ ಸಾಲ ಮತ್ತು ತದನಂತರದ ಬಡ್ಡಿಯನ್ನು ಹರಾಜಿನ ದಿನಾಂಕ **29ನೇ ಜೂನ್, 2022ರ ಸಾಯಂಕಾಲ 05.00ರೊಳಗಾಗಿ** ಮರುಪಾವತಿ ಮಾಡಲು ಕೊನೆಯ ಅವಕಾಶ ನೀಡಲಾಗಿದೆ ಇಲ್ಲವಾದಲ್ಲಿ ಈ ಭದ್ರತಾ ಆಸ್ತಿಯನ್ನು(ಗಳನ್ನು) ಕಾರ್ಯಸೂಚಿಯಂತೆ ಮಾರಾಟ ಮಾಡಲಾಗುತ್ತದೆ.

ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ಗೆ ಭಾವಿ ಬಿಡ್‌ದಾರ(ರು) ಮೇಲೆ ತಿಳಿಸಿದ ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ಆರ್‌ಟಿಜಿಎಸ್/ಡಿಮಾಂಡ್ ಡ್ರಾಫ್ಟ್ (ಡಿಡಿ)(ಕಾಲಂ ಸಂಖ್ಯೆ ಇ ರಲ್ಲಿ ನಮೂದಿಸಿದಂತೆ)ಯೊಂದಿಗೆ ಸಲ್ಲಿಸಬೇಕು. **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಸಿಟಿಎಸ್ ಸಂ. 3414, 1ನೇ ಮಹಡಿ, ಅನಂತ್ ಪ್ಲಾಜಾ, ಸಂದೇವಿ ಗಲ್ಲಿ, ಖಾಡೆ ಬಜಾರ್, ಬೋಗಾರ್ವೆಸ್ ಸರ್ಕಲ್ ಹತ್ತಿರ, ಬೆಳಗಾವಿ - 590002ಗೆ 29ನೇ ಜೂನ್, 2022ರಂದು ಅಥವಾ ಅದಕ್ಕೂ ಮೊದಲು ಸಂಜೆ 04:00ಕ್ಕಿಂತ ಮೊದಲು,** ದಯವಿಟ್ಟು ಗಮನಿಸಿ, ಒಂದು ವೇಳೆ ನಿರೀಕ್ಷಿತ ಬಿಡ್‌ದಾರರು(ಗಳು) ಮೇಲೆ ತಿಳಿಸಿದ ಸಮಯದ ಪ್ರಕಾರ ತಮ್ಮ ಪ್ರಸ್ತಾಪವನ್ನು ಸಲ್ಲಿಸಲು ಸಾಧ್ಯವಾಗದಿದ್ದರೆ ನಂತರ ಪ್ರತಿಗೆ ಸಹಿ ಮಾಡಿ ಟೆಂಡರ್ ದಾಖಲೆಗಳನ್ನು **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ಗೆ** ಸಲ್ಲಿಸುವುದು, **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಸಿಟಿಎಸ್ ಸಂ. 3414, 1ನೇ ಮಹಡಿ, ಅನಂತ್ ಪ್ಲಾಜಾ, ಸಂದೇವಿ ಗಲ್ಲಿ, ಖಾಡೆ ಬಜಾರ್, ಬೋಗಾರ್ವೆಸ್ ಸರ್ಕಲ್ ಹತ್ತಿರ, ಬೆಳಗಾವಿ - 590002 ರಲ್ಲಿ 29ನೇ ಜೂನ್, 2022ರಂದು ಅಥವಾ ಸಂಜೆ 05:00 ಕ್ಕೆ ಮೊದಲು** ಸಲ್ಲಿಸಬಹುದು. ಇಎಂಡಿಗಾಗಿನ ಅರ್ನೆಸ್ಟ್ ಮನಿ ಡೆಪಾಸಿಟ್ (ಡಿಡಿ) ಯಾವುದೇ ರಾಷ್ಟ್ರೀಕೃತ/ ಷೆಡ್ಯೂಲ್ ಬ್ಯಾಂಕಿನಿಂದ **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್-ಹರಾಜು ಬೆಳಗಾವಿ**ರವರ ಪದನಾಮಕ್ಕೆ ಪಾವತಿಯಾಗುವಂತಿರಬೇಕು.

ಪರಿಶೀಲನೆ, ಹರಾಜಿನ ಷರತ್ತು ಮತ್ತು ನಿಬಂಧನೆಗಳು ಅಥವಾ ಟೆಂಡರ್ ಸಲ್ಲಿಕೆಗಾಗಿನ ಇತರೆ ಯಾವುದೇ ಸ್ಪಷ್ಟನೆಗಳಿಗಾಗಿ ದಯವಿಟ್ಟು **ಐಸಿಐಸಿಐ ಹೋಮ್ ಫೈನಾನ್ಸ್** ಕಂಪನಿ ಲಿಮಿಟೆಡ್‌ನ ಮೊಬೈಲ್ ಸಂ.**7021072869.**

ಅಧಿಕೃತ ಅಧಿಕಾರಿಯು ಯಾವುದೇ ಬಿಡ್‌ಗಳನ್ನು ಯಾವುದೇ/ ಎಲ್ಲ ಬಿಡ್‌ಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸಬಹುದಾದ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.

ಮಾರಾಟದ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ದಯಮಾಡಿ ಐಸಿಐಸಿಐ ವೆಬ್‌ಸೈಟ್‌ಗೆ **https://www.icicihfc.com/** ಭೇಟಿ ಮಾಡಿ.

ದಿನಾಂಕ : ಜೂನ್ 16, 2022
ಸ್ಥಳ : ಬೆಳಗಾವಿ

ಅಧಿಕೃತ ಅಧಿಕಾರಿ
ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್

O.S. No. 632/2020

IN THE COURT OF HON'BLE PRINCIPAL CIVIL JUDGE AND J.M.F.C. BELAGAVI, AT: BELAGAVI

BETWEEN:
1) Karnataka Vikasa Grameena Bank
Fort Road Branch, Belagavi
... **PLAINTIFF**
AND:
1. Ruksana Mohammed Rafiq Mulla and 4 others
... **DEFENDANTS**
TO
Raisa Adbulaziz Yaragatti, (3)
H.No. 4672, Bhadkal Galli,
Belagavi-590 001

NOTICE UNDER ORDER V RULE 20 (I-A) OF C.P.C.

Whereas, the plaintiff has filed suit for recovery of money against the Defendants No. 1 and 5. Defendant No. 3 is hereby summoned to appear before Hon'ble Court of Principal Civil Judge and J.M.F.C. Belagavi on **18.07.2022** to answer the claim and you are directed to produce all documents upon which you rely upon your defence. Failing which an order will be passed accordingly in your absence. Please note and act upon.

Given under my hand and seal of the Court on 15.06.2022.

By order of the Court
Sd/- **Sheristedar**
Hon'ble Principal Civil Judge and J.M.F.C. Court, Belagavi

Sd/-,
(Sandhya Shanbhag)
Advocate for Plaintiff

Sd/-
Bench Clerk